ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

35

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ        ದಿನಾಂಕ : DATE : 16/3/21

**ಸದನ ಶೂರ**

### ಉತ್ತರ ಪಡೆದ ಯತ್ನಾಳ್

ಉ.ವಾ 16/3/21



ವಿಧಾನಸಭೆ: ಪಂಚಮಸಾಲಿ ಮೀಸಲಾತಿ ಹೋರಾಟ ಸಂಬಂಧ 23 ದಿನಗಳಿಂದ ನಡೆಯುತ್ತಿರುವ ಧರಣಿ ವಿಚಾರ ಜಂಟಿ ಅಧಿವೇಶನ ಹಾಗೂ ಬಜೆಟ್ ಅಧಿವೇಶನದಲ್ಲಿ ಸಮಯ ಸಿಕ್ಕಾಗಲೆಲ್ಲಾ ಪ್ರಸ್ತಾಪಿಸುತ್ತಿದ್ದ ಬಸನಗೌಡ ಪಾಟೀಲ್ ಯತ್ನಾಳ್ ಕೊನೆಗೂ ಮುಖ್ಯಮಂತ್ರಿಯವರಿಂದ ಉತ್ತರ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಮೀಸಲಾತಿ ವಿಚಾರದಲ್ಲಿ ಸ್ವಪಕ್ಷೀಯರನ್ನೂ ಎದುರು ಹಾಕಿಕೊಂಡು ಸರ್ಕಾರಕ್ಕೆ ಮುಜುಗರ ಉಂಟು ಮಾಡುತ್ತಿದ್ದ ಹಾಗೂ ಸಮು ದಾಯದ ಶ್ರೀಗಳ ಮೂಲಕ ಎಚ್ಚರಿಕೆ ಕೊಡಿಸುತ್ತಿದ್ದ ಯತ್ನಾಳ್‌ಗೆ ಸೋಮವಾರ ಸರ್ಕಾರದ ಪರವಾಗಿ ಸಿಕ್ಕಿದ ಉತ್ತರ ಹೋರಾಟಕ್ಕೆ ಜಯ ಎಂದೇ ವಿಶ್ಲೇಷಿಸಲಾಗುತ್ತಿದೆ. ಸಿಎಂ ಸದನದಲ್ಲಿ ಭರವಸೆ ನೀಡುತ್ತಿದ್ದಂತೆ ಕೆಲವು ಶಾಸಕರೂ ಯತ್ನಾಳ್ ಬಳಿ ಬಂದು ಚರ್ಚಿಸಿದ್ದು ಕುತೂಹಲ ಮೂಡಿಸಿತ್ತು.